ಚಿಂತಾಮಣಿ ಪಶುವೈದ್ಯಕೀಯ ಚಿಕಿತ್ಸಾಲಯದಲ್ಲಿ ಔಷಧಿಗಳನ್ನು ಸಹಾಯಕ ನಿರ್ದೇಶಕರು ದುರುಪಯೋಗ ಪಡಿಸಿಕೊಳ್ಳುತ್ತಿರುವುದು

1065 (1206) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಚಿಂತಾಮಣಿಯ ಪಶುವೈದ್ಯಕೀಯ ಚಿಕಿತ್ಸಾಲಯದಲ್ಲಿ ಔಷಧಿಗಳನ್ನು ಸಹಾಯಕ ನಿರ್ದೇಶಕರು ದುರುಪಯೋಗಪಡಿಸಿಕೊಳ್ಳುತ್ತಿರುವುದು ನಿಜವೇ?

ಆ) ಈ ಸಹಾಯಕ ನಿರ್ದೇಶಕರು ಸ್ಥಳೀಯವರಾಗಿದ್ದು ರಾಜಕೀಯವಾಗಿ ಪ್ರಭಾವೀ ವ್ಯಕ್ತಿಯಾಗಿರುವುದರಿಂದ ಕಳೆದ 8 ವರ್ಷಗಳಿಂದಲೂ ಯಾವುದೇ ವರ್ಗಾವಣೆಗೊಳ್ಳದೆ ಒಂದೇ ಸ್ಥಳದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ತುರ್ತು ಚಿಕಿತ್ಸೆ ನೀಡಲು ಸ್ಥಳದಿಂದ ಸ್ಥಳಕ್ಕೆ ಹೋಗಲು ಇರುವ ಸಂಚಾರಿ ವಾಹನವನ್ನು ಸದರಿ ನಿರ್ದೇಶಕರು ತಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದು ನಿಜವೇ?

ಈ) ಚಿಕಿತ್ಸಾಲಯದಲ್ಲಿ ಔಷಧಿಗಳು ಲಭ್ಯವಿದ್ದರೂ ಔಷಧಿ ಖರೀದಿಗಾಗಿ ಚೀಟಿಗಳನ್ನು ಬರೆದು ಹಣ ನೀಡಿದವರಿಗೆ ಉಚಿತ ಔಷಧಿಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ

ಆ) ಈಗಿರುವ ಸಹಾಯಕ ನಿರ್ದೇಶಕರು ದಿನಾಂಕ 15-06-98 ರಿಂದ ಪಶು ಚಿಕಿತ್ಸಾಲಯ, ಚಿಂತಾಮಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಅವರು 1992 ರಿಂದ ಅದೇ ಸ್ಥಳದಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಇ) ಗಮನಕ್ಕೆ ಬಂದಿರುವುದಿಲ್ಲ

ಈ) ಇಲ್ಲ

ಪಶುಸಂಗೋಪನಾ ಇಲಾಖೆಯಲ್ಲಿ ತರಬೇತಿ ಪಡೆದ ಪಶುವೈದ್ಯ ಪರೀಕ್ಷಕರ ನೇಮಕಾತಿ

1066 (1207) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಆನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುವೈದ್ಯ ಪರೀಕ್ಷಕರಾಗಿ ತರಬೇತಿ ಹೊಂದಿದ ಎಷ್ಟು ಜನ ಅಭ್ಯರ್ಥಿಗಳು ನೇಮಕಾತಿಯ ಆದೇಶಕ್ಕಾಗಿ ಕಾಯುತ್ತಿದ್ದಾರೆ? ಇವರ ನೇಮಕಾತಿಗಾಗಿ ಸರ್ಕಾರ ಯಾವುದಾದರೂ ಆದೇಶವನ್ನು ಹೊರಡಿಸಿದೆಯೇ? (ವಿವರ ನೀಡುವುದು)